ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 15-12-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ದೇಶಕ್ಕಾಗಿ ಪ್ರಾಣತೆತ್ತ ವೀರ ಯೋಧರ/ಹುತಾತ್ಮರ ಸ್ಮರಣೆಯ ಸಂಕೇತವಾಗಿ ವಿಜಯ ದಿವಸ್ ಆಚರಣೆ : | 16-12-2015 ಬುಧವಾರ ಬೆಳಿಗ್ಗೆ 9-15 ಗಂಟೆಗೆ | ರಾಷ್ಟ್ರೀಯ ಮಿಲಿಟರಿ ಸ್ಮಾರಕ, ನೆಹರೂ ತಾರಾಲಯದ ಎದುರು, ಬೆಂಗಳೂರು |
| 2. | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕುರಿತು ಒಂದು ದಿನದ ಕಾರ್ಯಾಗಾರ: | 16-12-2015 ಬುಧವಾರ ಬೆಳಿಗ್ಗೆ 9-30 ಗಂಟೆಗೆ | ಹೋಟೆಲ್ ಏಟ್ರಿಯಾ, ಅರಮನೆ ರಸ್ತೆ, ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಡಿಸೆಂಬರ್ 16 ರಂದು ವಿಜಯ ದಿವಸ್ ಆಚರಣೆ

ಬೆಂಗಳೂರು, ಡಿಸೆಂಬರ್ 15 (ಕರ್ನಾಟಕ ವಾರ್ತೆ)

1971 ರಲ್ಲಿ ನಡೆದ ಇಂಡೋ-ಪಾಕ್ ಯುದ್ಧದಲ್ಲಿ ಜಯವನ್ನು ತಂದು ಕೊಡಲು ದೇಶಕ್ಕಾಗಿ ಪ್ರಾಣತೆತ್ತ ವೀರ ಯೋಧರ/ಹುತಾತ್ಮರ ಸ್ಮರಣೆಯ ಸಂಕೇತವಾಗಿ ಪ್ರತಿ ವರ್ಷದಂತೆ, ಈ ವರ್ಷವೂ ಸಹ ವಿಜಯ ದಿವಸ್ ಆಚರಣೆಯನ್ನು ಡಿಸೆಂಬರ್ 16 ರಂದು ಬೆಳಿಗ್ಗೆ 9-15 ಗಂಟೆಗೆ ನೆಹರೂ ತಾರಾಲಯದ ಎದುರು ಇರುವ ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಸ್ಮಾರಕದಲ್ಲಿ ಆಚರಿಸಲಾಗುವುದು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಗೌರವ ಅತಿಥಿಗಳಾಗಿ ಪಾಲ್ಗೊಳ್ಳುವರು.. ಈ ಸಮಾರಂಭದಲ್ಲಿ ಸೇವಾ ನಿರತ/ನಿವೃತ್ತ ಹಿರಿಯ ಸೇನಾಧಿಕಾರಿಗಳು, ಮಾಜಿ ಸೈನಿಕರು, ಹಿರಿಯ ನಾಗರೀಕ ಸೇವಾ ಅಧಿಕಾರಿಗಳು,. ಎನ್.ಸಿ.ಸಿ. ಕೆಡೆಟ್ ಮತ್ತು ಶಾಲಾ/ಕಾಲೇಜು ಮಕ್ಕಳು ಸಹ ಪಾಲ್ಗೊಳ್ಳಲಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್.

# Observance of Vijay Diwas on 16th December

**Bengaluru December 15, 2015 (Karnataka Information)**

**Vijaya Diwas – 2015 will be observed on 16th December 2015 (Wednesday) at 9-15 AM at National Military Memorial, opp. Nehru Planetarium, Bengaluru - 560 001.**

**Chief Minister will be the Chief Guest and Home Minister G. will be the guest of honour for the function.**

**Other Ministers, Civil and Military Serving Officers, retired Defence Officers, Serving Soldiers, Ex-servicemen and their families, NCC Cadets and school children will be participating in the function.**

**pallavi:babu:gpr.**

# ಇಂಧನ ಸರಬರಾಜು ವ್ಯವಸ್ಥೆಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಡಿಸೆಂಬರ್ 15 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯ ಸಚಿವಾಲಯದ ಶಾಸಕರ ಭವನದಲ್ಲಿ ಇರುವ 70 ವಾಹನಗಳಿಗೆ ಮಾಹೆಯಾನ ಸುಮಾರು ಹತ್ತು ಸಾವಿರ ಲೀಟರ್ ಇಂಧನ ಬಳಸಲಾಗುತ್ತಿದ್ದು, ಈ ವಾಹನಗಳಿಗೆ ಇಂಧನ ಸರಬರಾಜು ಮಾಡಲು ವಿಧಾನಸೌಧದಿಂದ ಎರಡರಿಂದ ಮೂರು ಕಿ.ಮೀ ಅಂತರವಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್ (IOC) ನ ವಿವಿಧ ಸಂಸ್ಥೆಗಳ ಪೆಟ್ರೋಲ್ ಬಂಕ್‌ಗಳಿಂದ ವಾಹನಗಳಿಗೆ ಪ್ರತಿನಿತ್ಯ ಇಂಧನ ಸರಬರಾಜು ಮಾಡಲು ಆಸಕ್ತರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತರು, ತಮ್ಮ ಅರ್ಜಿಯೊಂದಿಗೆ ಬಂಕ್‌ಗಳ ವಿವರ, ಸೌಲಭ್ಯ, ಆಸಕ್ತಿ ಇತ್ಯಾದಿ ವಿವರಗಳನ್ನು ಕ್ಷೇತ್ರಾಧಿಕಾರಿ, ಶಾಸಕರ ಭವನ, ವಿಧಾನಸಭೆಯ ಸಚಿವಾಲಯ, ಬೆಂಗಳೂರು – 560 233 ಇವರಿಗೆ ಒಂದು ತಿಂಗಳೊಳಗಾಗಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ದೂ. 080 – 22359570 ನ್ನು ಸಂಪರ್ಕಿಸಬಹುದಾಗಿದೆ ಎಂದು ಶಾಸಕರ ಭವನದ ಕ್ಷೇತ್ರಾಧಿಕಾರಿ ಕೆ. ವಿ. ಮುದ್ದಯ್ಯ ತಿಳಿಸಿದ್ದಾರೆ.

ಪಲ್ಲವಿ:ಬಾಬು:ಜೆಪಿಆರ್.

# ಕೆ.ಎ.ಟಿ.ಗೆ ಕ್ರಿಸ್‌ಮಸ್ ರಜೆ

ಬೆಂಗಳೂರು, ಡಿಸೆಂಬರ್ 15 (ಕರ್ನಾಟಕ ವಾರ್ತೆ)

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ನ್ಯಾಯಾಪೀಠ – 1 ರಿಂದ 8 ರವರೆಗೆ ಡಿಸೆಂಬರ್ 21 ರಿಂದ 31 ರವರೆಗೆ ಕ್ರಿಸ್‌ಮಸ್ ರಜೆಯನ್ನು ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 21 ರಿಂದ 31 ರವರೆಗೆ ನ್ಯಾಯಾಧೀಕರಣದ ಎಲ್ಲಾ 8 ನ್ಯಾಯಾಪೀಠಗಳು "ಏಕ ಸದಸ್ಯ ಪೀಠ" ಗಳಾಗಿ ಕಾರ್ಯನಿರ್ವಹಿಸುತ್ತದೆ ಎಂದು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ನಿಬಂಧಕರು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಬಾಬು:ಜೆಪಿಆರ್